**All India Radio: Bangalore**
**National Bulletin In Kannada**
**30.08.2026  1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**30.08.2026  1.10 p.m.**

**<><><><>**

ಮುಖ್ಯಾಂಶಗಳು

1. ಮಾದಕದ್ರವ್ಯ ಮುಕ್ತ ಭಾರತ ನಿರ್ಮಾಣಕ್ಕೆ ಸಂಕಲ್ಪ ತೊಡುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ
2. 'ಮನ್ ಕಿ ಬಾತ್': ಬೆಂಗಳೂರಿನ 'ಪಿಎಂ ಸ್ವನಿಧಿ' ಫಲಾನುಭವಿ ಮತ್ತು ಚಿಕ್ಕಮಗಳೂರಿನ ಅವಕಾಡೊ ಕೃಷಿ ಬಗ್ಗೆ ಪ್ರಧಾನಮಂತ್ರಿ ಶ್ಲಾಘನೆ
3. ಉಜ್ಬೇಕಿಸ್ತಾನ್ ಅಧ್ಯಕ್ಷರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದ್ವಿಪಕ್ಷೀಯ ಮಾತುಕತೆ; ವಿವಿಧ ವಲಯಗಳ ಸಹಕಾರ ಬಲವರ್ಧನೆಗೆ ಒತ್ತು
4. ನೇಪಾಳ ಪ್ರವಾಹ; ಮೃತರ ಸಂಖ್ಯೆ ೭೩ಕ್ಕೆ ಏರಿಕೆ
5. ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್; ಫೈನಲ್‌ನಲ್ಲಿ ಇಂದು ಜರ್ಮನಿ - ಸ್ಪೇನ್ ಮುಖಾಮುಖಿ

<><><><>

ದೇಶದ ಯುವಜನತೆಯನ್ನು ಮಾದಕ ವಸ್ತುಗಳ ದುಷ್ಟ ಚಟದಿಂದ ಮುಕ್ತಗೊಳಿಸಿ, ಅವರ ಉಜ್ವಲ ಭವಿಷ್ಯಕ್ಕಾಗಿ ಎಲ್ಲರೂ ಒಟ್ಟಾಗಿ 'ವಿಕಸಿತ ಭಾರತಕ್ಕಾಗಿ ಮಾದಕದ್ರವ್ಯ ಮುಕ್ತ ಯುವಸಮೂಹ' ಎಂಬ ದೃಢ ಸಂಕಲ್ಪ ಕೈಗೊಳ್ಳಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶವಾಸಿಗಳಿಗೆ ಕರೆ ನೀಡಿದ್ದಾರೆ. ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ ಮನ್ ಕಿ ಬಾತ್‌ನ ೧೩೭ನೇ ಆವೃತ್ತಿಯಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿದ ಅವರು, ಮದ್ಯಪಾನ ಅಥವಾ ಮಾದಕ ವಸ್ತುಗಳ ವ್ಯಸನ, ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ಹಾಳು ಮಾಡದೆ, ಇಡೀ ಕುಟುಂಬ ಮತ್ತು ಸಮಾಜದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು. ಮಾದಕ ವಸ್ತುಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸಲು ನಮ್ಮ ಯುವ ಸಂಗೀತಗಾರರು, ವಿದ್ಯಾರ್ಥಿಗಳು, ನಾಟಕ ತಂಡಗಳು ಮತ್ತು ಗಣನೀಯ ಕೊಡುಗೆ ನೀಡುವ ವಿಷಯ

ರಚನಾಕಾರರು ವಿವಿಧ ಭಾಷೆಗಳಲ್ಲಿ ಉತ್ತಮ ಹಾಡುಗಳನ್ನು, ಸಣ್ಣ ನಾಟಕಗಳನ್ನು ಹಾಗೂ ಜಾಗೃತಿ ಘೋಷಣೆಗಳನ್ನು ರಚಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಈ ಸಂಚಿಕೆಯಲ್ಲಿ ಪ್ರಧಾನಿಯವರು, ಮುಂಬೈನಲ್ಲಿ ನೆಲೆಸಿರುವ ಕೃಷ್ಣ ಶೇಷಾದ್ರಿ ಅವರೊಂದಿಗೆ ದೂರವಾಣಿ ಮೂಲಕ ಸಂವಾದ ನಡೆಸಿದರು. ಕೃಷ್ಣ ಅವರು ಭಾರತೀಯ ಇತಿಹಾಸವನ್ನು ಆಸಕ್ತಿದಾಯಕವಾಗಿ ತಿಳಿಸಲು www.bharatrajya.com ಎಂಬ ಜಾಲತಾಣ ರೂಪಿಸಿದ್ದು, ಚೋಳರು, ಪಲ್ಲವರು, ಕಾಶ್ಮೀರದ ಕಾರ್ಕೋಟ ವಂಶ ಹಾಗೂ ಕನಿಷ್ಠ ೬೦೦ ವರ್ಷಗಳ ಕಾಲ ತಮ್ಮ ಸಂಸ್ಕೃತಿಯನ್ನು ಸಂರಕ್ಷಿಸಿದ ಅಸ್ಸಾಂನ ಅಹೋಮ್ ರಾಜವಂಶಗಳಂತಹ ಮಹಾನ್ ಸಾಮ್ರಾಜ್ಯಗಳ ವಿವರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಈ ಕುರಿತು ಪ್ರಧಾನಿ ಶ್ಲಾಘನೆ ವ್ಯಕ್ತಪಡಿಸಿದರು. ಆಗಸ್ಟ್ ತಿಂಗಳಿನಲ್ಲಿ ದೇಶಭಕ್ತಿಯ ಭಾವ ಮೂಡಿಸಿದ ಕ್ಷಣಗಳನ್ನು ಸ್ಮರಿಸಿದ ಪ್ರಧಾನಿ, 'ರಾಷ್ಟ್ರೀಯ ಕೈಮಗ್ಗ ದಿನ', 'ಕ್ವಿಟ್ ಇಂಡಿಯಾ ಚಳವಳಿಯ ವಾರ್ಷಿಕೋತ್ಸವ', 'ವಿಭಜನೆಯ ಭೀಕರತೆಯ ನೆನಪಿನ ದಿನ', 'ಸ್ವಾತಂತ್ರ್ಯ ದಿನಾಚರಣೆ' ಹಾಗೂ 'ರಾಷ್ಟ್ರೀಯ ಬಾಹ್ಯಾಕಾಶ ದಿನ'ಗಳ ಮಹತ್ವವನ್ನು ವಿವರಿಸಿದರು. 'ಹರ್ ಘರ್ ತಿರಂಗಾ' ಅಭಿಯಾನದಡಿಯಲ್ಲಿ ೮ ಕೋಟಿಗೂ ಹೆಚ್ಚು ಸೆಲ್ಫಿಗಳನ್ನು ಅಪ್‌ಲೋಡ್ ಮಾಡಲಾಗಿದೆ ಎಂದರು. ಇದೇ ವೇಳೆ ಅವರು, ರಾಷ್ಟ್ರಗೀತೆ 'ವಂದೇ ಮಾತರಂ'ಗೆ ೧೫೦ ವರ್ಷ ಪೂರೈಸಿರುವುದನ್ನು ಹೆಮ್ಮೆಯಿಂದ ಹಂಚಿಕೊಂಡರು. ಬೀದಿಬದಿ ವ್ಯಾಪಾರ ಮಾಡುವ ಲಕ್ಷಾಂತರ ಮಹಿಳೆಯರಿಗೆ 'ಪಿಎಂ ಸ್ವನಿಧಿ ಯೋಜನೆ'ಯಿಂದ ನೂತನ ಶಕ್ತಿ ದೊರೆಯುತ್ತಿದ್ದು, ಈ ಯೋಜನೆಯ ಫಲಾನುಭವಿಗಳಲ್ಲಿ ಶೇಕಡಾ ೪೬ ರಷ್ಟು ಅಂದರೆ ಸರಿಸುಮಾರು ೩೫ ಲಕ್ಷ ಮಹಿಳೆಯರೇ ಇದ್ದಾರೆ ಎಂದು ತಿಳಿಸಿದರು. ಬೆಂಗಳೂರಿನ ಟಿ.ಎಸ್.ನಿಂಗಮ್ಮ ಅವರ ಪ್ರೇರಣಾದಾಯಕ ಉದಾಹರಣೆಯನ್ನು ನೀಡಿದ ಪ್ರಧಾನಿ, ನಿಂಗಮ್ಮ ಮತ್ತು ಅವರ ಪತಿ ಜೊತೆಗೂಡಿ ಇಡ್ಲಿ, ದೋಸೆ ಹಾಗೂ ಸಾಂಬಾರ್ ಮಾರಾಟ ಮಾಡುವ ಸಣ್ಣ ಉದ್ಯೋಗ ಪ್ರಾರಂಭಿಸಿದ್ದರು. 'ಪಿಎಂ ಸ್ವನಿಧಿ' ಯೋಜನೆಯಿಂದ ಲಭಿಸಿದ ಆರ್ಥಿಕ ನೆರವಿನಿಂದ ಅವರು ತಮ್ಮ ತಳ್ಳುವ ಗಾಡಿಯನ್ನು ನವೀಕರಿಸಿ, ಸಾಮಗ್ರಿಗಳನ್ನು ಸಗಟು ದರದಲ್ಲಿ ಖರೀದಿಸಿ, ನೂತನ ತಿಂಡಿಗಳ ಮಾರಾಟ ಆರಂಭಿಸಿದರು. ಇದರಿಂದ ಅವರ ಆದಾಯ ಹೆಚ್ಚಾಗಿ, ತಮ್ಮ ಮೂವರು ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಲು ಶಕ್ತರಾಗಿದ್ದಾರೆ ಎಂದು ಪ್ರಶಂಸಿದರು.

**ಧ್ವನಿ: ಪ್ರಧಾನಿ ( ೩೦ ಸೆಕೆಂಡ್ಸ್ ನಿಂಗಮ್ಮ)**

ಉತ್ತರ ಪ್ರದೇಶದ ರಾಂಪುರದ 'ಪಟವಾಯಿ' ಗ್ರಾಮದ ಆಕಾಶ್ ಮತ್ತು ರೋಹನ್ ಎಂಬ ಇಬ್ಬರು ಯುವಕರು ಆರಂಭಿಸಿದ 'ಕ್ಲೀನ್-ಅಪ್ ಪಟವಾಯಿ' ತಂಡವು ನಾಲ್ಕು ಗಂಗಾ ಘಾಟ್‌ಗಳನ್ನು ಸ್ವಚ್ಛಗೊಳಿಸಿರುವ ಕುರಿತು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಶ್ರೀ ಅಮರನಾಥ ಯಾತ್ರೆಯ ವೇಳೆ ಕೈಗೊಂಡ ಸ್ವಚ್ಛತಾ ಕ್ರಮ ಮತ್ತು ಯಾತ್ರಿಕರ ಸ್ವಚ್ಛತಾ ಸಂಕಲ್ಪ ಕುರಿತು ಪ್ರಸ್ತಾಪಿಸಿದರು. ಕೃಷಿ ಕ್ಷೇತ್ರದ ಸಾಧನೆಯಾಗಿ, ನಾಗಾಲ್ಯಾಂಡ್‌ನ ಫೆಕ್ ಜಿಲ್ಲೆಯ ರೈತ ಕುಟುಂಬದ ವೇಸಾಲು ಪುರೊ ಹಾಗೂ ಒಡಿಶಾದ ದೇವ್‌ರೀಗಢದ ಧೋಡೋಕುಸುಮ್ ಗ್ರಾಮದ ಮೈಥಿಲಿ ಭುಯೇ ಸಾಧನೆಗಳನ್ನು ಶ್ಲಾಘಿಸಿದರು. ಕರ್ನಾಟಕದ ಕೃಷಿ ಕ್ಷೇತ್ರದ ವಿನೂತನ ಹೆಜ್ಜೆಯನ್ನು ಪ್ರಧಾನಿಯವರು ಪ್ರಮುಖವಾಗಿ ಪ್ರಸ್ತಾಪಿಸಿದರು. ಇತ್ತೀಚೆಗೆ ಅವಕಾಡೋ ಅಂದರೆ ಬೆಣ್ಣೆ ಹಣ್ಣಿನ ಬೇಡಿಕೆ ತೀವ್ರವಾಗಿದ್ದು, ಆರೋಗ್ಯದ ಬಗ್ಗೆ ಕಾಳಜಿ ಉಳ್ಳವರಿಗೆ ಮತ್ತು ಉನ್ನತ ಮಾರುಕಟ್ಟೆಗೆ ಇದು ಮೊದಲ ಆಯ್ಕೆಯಾಗಿದೆ ಎಂದರು. ಕರ್ನಾಟಕದ ಚಿಕ್ಕಮಗಳೂರಿನ ಕೆಲವು ರೈತ ಸಹೋದರ-ಸಹೋದರಿಯರು ಕಾಫಿ ತೋಟದ ಮಧ್ಯದಲ್ಲೇ ಅವಕಾಡೋ ಗಿಡ ನೆಟ್ಟು ಯಶಸ್ವಿಯಾಗಿದ್ದಾರೆ ಎಂದು ಪ್ರಧಾನಿ ಹೇಳಿದರು. ಇದೇ ವೇಳೆ ಆಂಧ್ರಪ್ರದೇಶದ ಕಡಪಾದ ವರದರಾಜು ತಮಿಳುನಾಡಿನ ಕೊಡೈಕೆನಾಲ್‌ನ ಚಂದ್ರಶೇಖರನ್ ಅವರ ಯಶಸ್ಸನ್ನೂ ಪ್ರಧಾನಿ ಪ್ರಸ್ತಾಪಿಸಿದರು. ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದ ಗೌತಮಬುದ್ಧ ವಿಶ್ವವಿದ್ಯಾಲಯದಲ್ಲಿ 'ರಾಷ್ಟ್ರೀಯ ಬಾಹ್ಯಾಕಾಶ ದಿನ'ದಂದು 'ಮಿಷನ್ ಶಕ್ತಿಸ್ಯಾಟ್' ಎರಡನೇ ಹಂತಕ್ಕೆ ಚಾಲನೆ ಸಿಕ್ಕಿದ್ದು, ೧೦೮ ದೇಶಗಳ ೧೨ ಸಾವಿರ ವಿದ್ಯಾರ್ಥಿನಿಯರು ಇದರಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ತಾಷ್ಕೆಂಟ್‌ನಲ್ಲಿ ಉಜ್ಬೇಕಿಸ್ತಾನ್ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆಯಲ್ಲಿ ಪಾಲ್ಗೊಂಡಿದ್ದಾರೆ. ಸಭೆಯಲ್ಲಿ ಉಭಯ ನಾಯಕರು, ವ್ಯಾಪಾರ ಮತ್ತು ಹೂಡಿಕೆ, ರಕ್ಷಣೆ, ಡಿಜಿಟಲ್ ಸಂಪರ್ಕ, ಇಂಧನ, ಶಿಕ್ಷಣ ಹಾಗೂ ಸಾರ್ವಜನಿಕ ಸಂಪರ್ಕ ಕ್ಷೇತ್ರಗಳಲ್ಲಿ ಎರಡೂ ದೇಶಗಳ ನಡುವಿನ ಸಹಕಾರ ಮತ್ತು ಪ್ರಗತಿಯನ್ನು ಸಮಗ್ರವಾಗಿ ಪರಾಮರ್ಶಿಸುತ್ತಿದ್ದಾರೆ. ಇದಕ್ಕೂ ಮುನ್ನ

ತಾಷ್ಕೆಂಟ್‌ಗೆ ಆಗಮಿಸಿದ ಪ್ರಧಾನಿಯವರು ಉಜ್ಬೇಕಿಸ್ತಾನ್‌ನ ಯೋಗ ಫೆಡರೇಷನ್ ಆಯೋಜಿಸಿದ್ದ ವಿಶೇಷ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

<><><><>

ಮಧ್ಯ ನೇಪಾಳದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ ಇಂದು ೭೩೪ಕ್ಕೆ ಏರಿಕೆಯಾಗಿದೆ. ಇನ್ನಷ್ಟು ಮೃತದೇಹಗಳು ಪತ್ತೆಯಾಗುತ್ತಿದ್ದು, ಸುಮಾರು ೧ ಸಾವಿರ ೫೦೦ ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ದುರಂತ ಸಂಭವಿಸಿ ಐದನೇ ದಿನವೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಸಂತ್ರಸ್ತರಾದವರ ಪತ್ತೆ ಹಾಗೂ ಸಿಲುಕಿರುವವರ ರಕ್ಷಣೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದುವರೆಗೆ ಪ್ರವಾಹ ಪೀಡಿತ ಜಿಲ್ಲೆಗಳಿಂದ ೧೧೭ ವಿದೇಶಿಯರು ಸೇರಿದಂತೆ ೮ ಸಾವಿರದ ೯೮೬ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಇದೇ ವೇಳೆ, ಭೋಟೆ ಕೋಶಿ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ನೇಪಾಳ ಸರ್ಕಾರ ಹೊಸ ಪ್ರವಾಹ ಎಚ್ಚರಿಕೆ ನೀಡಿದೆ. ಹಠಾತ್ ಪ್ರವಾಹ ಪೀಡಿತ ನೇಪಾಳದಲ್ಲಿ ಭಾರತವು ನಿರಂತರವಾಗಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗೆ ನೆರವು ಮುಂದುವರಿಸಿದೆ.

<><><><>

ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್-೨೦೨೬ರ ಫೈನಲ್ ಪಂದ್ಯಕ್ಕೆ ವೇದಿಕೆ ಸಜ್ಜಾಗಿದ್ದು, ಬೆಲ್ಜಿಯಂನಲ್ಲಿಂದು ಪ್ರಶಸ್ತಿ ಹಣಾಹಣಿಯಲ್ಲಿ ಹಾಲಿ ಚಾಂಪಿಯನ್ ಜರ್ಮನಿ ಮತ್ತು ಸ್ಪೇನ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ೨೦೨೩ರಲ್ಲಿ ಗೆದ್ದ ಪ್ರಶಸ್ತಿಯನ್ನು ಉಳಿಸಿಕೊಳ್ಳುವ ಜೊತೆಗೆ ದಾಖಲೆಯ ನಾಲ್ಕನೇ ವಿಶ್ವಕಪ್ ಪ್ರಶಸ್ತಿ ಗೆಲ್ಲುವ ಗುರಿಯೊಂದಿಗೆ ಜರ್ಮನಿ ಕಣಕ್ಕಿಳಿಯಲಿದೆ. ಇದೇ ವೇಳೆ, ಸ್ಪೇನ್ ತನ್ನ ಚೊಚ್ಚಲ ಹಾಕಿ ವಿಶ್ವಕಪ್ ಪ್ರಶಸ್ತಿ ಗೆಲ್ಲುವ ನಿರೀಕ್ಷೆಯಲ್ಲಿದೆ.

<><><><>

ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಟಿ-೨೦ ಮಹಿಳಾ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಭಾರತದ ಮಹಿಳಾ ತಂಡ, ಥಾಯ್ಲೆಂಡ್ ವಿರುದ್ಧ ಅಭಿಯಾನ ಆರಂಭಿಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮.೩೦ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>